# ಕಲಿಕಾ ಚೇತರಿಕೆ – ಕಾರ್ಯಕ್ರಮ

## ಹಿನ್ನೆಲೆ

ಕೋವಿಡ್ 19 ಸಾಂಕ್ರಾಮಿಕ ಜಾಗತಿಕವಾಗಿ ಹರಡಿರುವ ಹಿನ್ನೆಲೆಯಲ್ಲಿ 2019–2020 ಮತ್ತು 2020–2021 ನೇ ಸಾಲಿನಲ್ಲಿ ಸರಿಯಾಗಿ ಭೌತಿಕ ತರಗತಿಗಳು ನಡೆದಿರುವುದಿಲ್ಲ ಹಾಗೂ 2021–2022 ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ತಡವಾಗಿ ಪ್ರಾರಂಭಗೊಂಡಿವೆ. ಈ ವರೆಗೆ ಸೇತುಬಂಧ, ಪರ್ಯಾಯ ಶೈಕ್ಷಣಿಕ ಯೋಜನೆ, ವಿದ್ಯಾಗಮ, ಸಂವೇದಗಳಂತಹ ಕಾರ್ಯಕ್ರಮಗಳನ್ನು ಅಳವಡಿಸಲಾಗಿದ್ದರೂ ಸತತ 2 ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಶಾಲೆಗೆ ಹಾಜರಾಗದೇ ಇದ್ದುದರಿಂದ ಹಿಂದಿನ ಎರಡು ತರಗತಿಗಳ ಕಲಿಕಾ ಸಾಮರ್ಥ್ಯಗಳ ಕಲಿಕೆಯಲ್ಲೂ ಹಿನ್ನಡೆ ಉಂಟಾಗಿರುವುದು ಕಂಡುಬಂದಿದೆ.

ಕೋವಿಡ್‌ನಿಂದ ಉಂಟಾಗಿರುವ ಕಲಿಕಾ ಹಿನ್ನಡೆಯನ್ನು ಹೊರತುಪಡಿಸಿ, ಪ್ರಸ್ತುತ ಪ್ರಾಥಮಿಕ ಶಾಲೆಯಲ್ಲಿನ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮೂಲಪಠ್ಯವನ್ನು ಓದುವ ಮತ್ತು ಗ್ರಹಿಸುವ ಸಾಮರ್ಥ್ಯ ಹಾಗೂ ಅಂಕಿಗಳೊಂದಿಗೆ ಮೂಲಕ್ರಿಯೆಗಳಾದ ಸಂಕಲನ ಮತ್ತು ವ್ಯವಕಲನವನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಪಡೆದಿರುವುದಿಲ್ಲ ಎಂದು ಎನ್.ಇ.ಪಿ 2020 ರಲ್ಲಿ ಉಲ್ಲೇಖಿಸಿದೆ. ಪ್ರಾಥಮಿಕ ಶಾಲೆಯಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನವನ್ನು ಸಾಧಿಸುವುದು ಶಿಕ್ಷಣ ವ್ಯವಸ್ಥೆಯ ಪ್ರಥಮ ಆದ್ಯತೆಯಾಗಿರಬೇಕೆಂದು ಶಿಕ್ಷಣ ನೀತಿಯು ಪ್ರತಿಪಾದಿಸುತ್ತದೆ ಹಾಗೂ ಈ ಮೂಲಭೂತ ಕಲಿಕೆಯ ಅವಶ್ಯಕತೆಯನ್ನು ಮೊದಲು ಸಾಧಿಸಿದರೆ ಮಾತ್ರ ನೀತಿಯ ಉಳಿದ ಭಾಗವು ವಿದ್ಯಾರ್ಥಿಗಳಿಗೆ ಪ್ರಸ್ತುತವಾಗುತ್ತದೆ ಎಂದು ಅಭಿಪ್ರಾಯಿಸಿದೆ. ಆದ್ದರಿಂದ ಎಲ್ಲಾ ತರಗತಿಗಳಲ್ಲಿಯೂ (1 ರಿಂದ 9) ಪ್ರಸ್ತುತ ತರಗತಿಯ ನಿರ್ದಿಷ್ಟ ಕಲಿಕಾಫಲಗಳೊಂದಿಗೆ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಅಂತರ್ಗತ ಗೊಳಿಸುವ ಅವಶ್ಯಕತೆ ಕಂಡುಬಂದಿದೆ.

ವಿಮರ್ಶಾತ್ಮಕ ಚಿಂತನೆ, ಆವಿಷ್ಕಾರ ಆಧಾರಿತ ಕಲಿಕೆಗೆ ಅವಕಾಶ ಕಲ್ಪಿಸಲು ಪ್ರತಿ ತರಗತಿಯಲ್ಲಿ ಪ್ರತಿ ವಿಷಯದಲ್ಲಿ ಪಠ್ಯಕ್ರಮದ ವಿಷಯವಸ್ತುವನ್ನು, ಅದರಲ್ಲಿನ ಪ್ರಮುಖ ಅಂಶಗಳಿಗೆ **(core competency)** ಸೀಮಿತಗೊಳಿಸಿ ಪಠ್ಯಕ್ರಮವನ್ನು ಕಡಿಮೆ ಮಾಡುವಂತೆ ಶಿಕ್ಷಣ ನೀತಿಯು ಶಿಫಾರಸ್ಸು ಮಾಡಿರುತ್ತದೆ. ಹಿಂದಿನ ತರಗತಿಯಲ್ಲಿ ಪಡೆಯಬೇಕಾಗಿದ್ದ ಕೌಶಲ ಮತ್ತು ಜ್ಞಾನವನ್ನು ಗಳಿಸಲು ಅನುಕೂಲವಾಗುವಂತೆ, ಹಿಂದಿನ ತರಗತಿಗಳ ಪ್ರಮುಖ ಕಲಿಕಾ ಸಾಮರ್ಥ್ಯಗಳನ್ನೂ ಒಳಗೊಂಡಂತೆ ಪ್ರಸ್ತುತ ಓದುತ್ತಿರುವ ತರಗತಿಯ ಪ್ರಮುಖ ಕಲಿಕಾ ಸಾಮರ್ಥ್ಯಗಳು **(core competency)** ಹಾಗೂ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಅಂತರ್ಗತ ಗೊಳಿಸಿ 2022–2023 ನೇ ಸಾಲಿಗೆ ವಿಷಯವಾರು, ತರಗತಿವಾರು ಪರಿಷ್ಕೃತ ಕಲಿಕಾಫಲಗಳನ್ನು ಒಳಗೊಂಡ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ ಕಲಿಕಾ ಚೇತರಿಕೆಯನ್ನು ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ 2022 – 2023 ಶೈಕ್ಷಣಿಕ ವರ್ಷದಲ್ಲಿ "ಕಲಿಕಾ ಚೇತರಿಕೆ" ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಿದೆ.

ಕಲಿಕಾಫಲಗಳ ಸಾಧನೆಯಲ್ಲಿನ ಅಂತರವನ್ನು ಕಡಿಮೆ ಮಾಡಲು ಸಂಕಲನಾತ್ಮಕ ಮತ್ತು ಕಂಠಪಾಠ ಕೌಶಲಗಳನ್ನು ಪರೀಕ್ಷಿಸುವ ಸಾಂಪ್ರದಾಯಿಕ ವಿಧಾನದ ಬದಲು ಸಾಮರ್ಥ್ಯ ಆಧಾರಿತ ಹಾಗೂ ಮಕ್ಕಳಲ್ಲಿ ಕಲಿಕೆ ಮತ್ತು ಬೆಳವಣಿಗೆಯನ್ನು ಉತ್ತೇಜಿಸಲು ಪೂರಕವಾಗಿ ಕೋರ್ ಸಾಮರ್ಥ್ಯಗಳನ್ನು ಹಾಗೂ ಉನ್ನತ ಹಂತದ ಕೌಶಲಗಳ ಸಾಧನೆಯನ್ನು ಪರೀಕ್ಷಿಸುವ ಮೌಲ್ಯಮಾಪನ ವಿಧಾನವನ್ನು ಅಳವಡಿಸುವ ಕುರಿತು ಎನ್.ಇ.ಪಿ 2020 ಶಿಫಾರಸ್ಸು ಮಾಡಿದೆ.

ಈ ಹಿನ್ನೆಲೆಯಲ್ಲಿ ತರಗತಿವಾರು, ವಿಷಯಾವಾರು ನಿರ್ದಿಷ್ಟ ಕಲಿಕಾ ಫಲಗಳ ಅನ್ವಯ ಕಲಿಕೆಗಾಗಿ ಮೌಲ್ಯಮಾಪನ **(assessment for learning)** ಮತ್ತು ಕಲಿಕೆಯಾಗಿ ಮೌಲ್ಯಮಾಪನ **(assessment as learning)** ತಂತ್ರಗಳನ್ನು ಅಳವಡಿಸುವುದು ಸೂಕ್ತವಾಗಿದೆ. ಈ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಅವಶ್ಯಕತೆಯನ್ನು ಅರಿತು ಅದರನ್ವಯ ತರಗತಿ ಸಂವಹನವನ್ನು ನಡೆಸಲು ಒಂದು ವಿನೂತನ, ವಿಶೇಷ ಶೈಕ್ಷಣಿಕ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕಾಗಿದೆ.



ಎನ್.ಇ.ಪಿ 2020 ಶಿಫಾರಸ್ಸಿನಲ್ಲಿ ತಿಳಿಸಿರುವ ಮೇಲ್ಕಂಡ ಎಲ್ಲಾ ಅಂಶಗಳನ್ನು ಒಳಗೊಂಡ ಸಮಗ್ರ ಕಲಿಕಾ ಸಾಮಗ್ರಿಗಳನ್ನು ಸಿದ್ದಪಡಿಸಿ, 2022–2023 ಶೈಕ್ಷಣಿಕ ಸಾಲಿನಲ್ಲಿ ಅಳವಡಿಸುವುದರಿಂದ ಕೋವಿಡ್–19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಮಕ್ಕಳ ಕಲಿಕೆಯಲ್ಲಿ ಉಂಟಾಗಿರುವ ಅಂತರವನ್ನು ಬೆಸೆಯಲು ಸಹಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯ ಜೊತೆಯಲ್ಲಿಯೇ ಮೌಲ್ಯಮಾಪನವನ್ನು ಸಮನ್ವಯಗೊಳಿಸಿ, ಮೌಲ್ಯಮಾಪನ ಅಂಶಗಳ ದಾಖಲೆಯನ್ನು ನಿರ್ವಹಿಸುವ ಅವಶ್ಯಕತೆ ಇದೆ. ಆದ್ದರಿಂದ ವಿದ್ಯಾರ್ಥಿಯ ವೈಯಕ್ತಿಕ ಕೃತಿಸಂಪುಟವನ್ನು **(students individual portfolio)** ನಿರ್ವಹಿಸಲು ಅನುವಾಗುವಂತೆ **perforated** ಕಲಿಕಾ ಹಾಳೆಗಳನ್ನು ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಮಾರ್ಗಸೂಚಿಗಳನ್ನು ಒಳಗೊಂಡ ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಲಾಗುವುದು.

### ಕಾರ್ಯಕ್ರಮದ ಗುರಿ :

1. ರಾಷ್ಟ್ರೀಯ ಶಿಕ್ಷಣ ನೀತಿ – 2020 ಆಶಯದಂತೆ ಬುನಾದಿ ಸಾಕ್ಷರತೆ ಹಾಗೂ ಸಂಖ್ಯಾ ಜ್ಞಾನವನ್ನು ಬೆಳೆಸುವುದು.
2. 2022–23 ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಕಲಿಕಾ ಚೇತರಿಕೆ ವರ್ಷ ಎಂದು ಘೋಷಿಸುವುದರ ಮೂಲಕ ರಾಜ್ಯಾದ್ಯಂತ ನಿರ್ದೇಶಿತ ಏಕರೂಪದ ಶೈಕ್ಷಣಿಕ ಪ್ರಕ್ರಿಯೆಯನ್ನು ಜಾರಿಗೊಳಿಸುವುದನ್ನು ನಿಶ್ಚಿತಗೊಳಿಸುವುದು.
3. ಎಲ್ಲಾ ವಿದ್ಯಾರ್ಥಿಗಳ ಭಾವನಾತ್ಮಕ ಅಗತ್ಯತೆಗಳ ಬೆಂಬಲಕ್ಕೆ ಗಮನ ಹರಿಸಿ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದನ್ನು ಖಾತ್ರಿ ಪಡಿಸುವುದು.
4. ಎಲ್ಲಾ ವಿದ್ಯಾರ್ಥಿಗಳು ಬುನಾದಿ ಸಾಕ್ಷರತೆ, ಸಂಖ್ಯಾ ಜ್ಞಾನ ಮತ್ತು ಈ ಹಿಂದಿನ ಎರಡು ತರಗತಿಗಳಲ್ಲಿ ಅತ್ಯಗತ್ಯವಾಗಿ ಗಳಿಸಬೇಕಿದ್ದ ಕಲಿಕಾ ಫಲಗಳು ಹಾಗೂ ಪ್ರಸಕ್ತ ತರಗತಿಯ ಅತ್ಯಗತ್ಯ ಕಲಿಕಾ ಫಲಗಳನ್ನು ಸಾಧಿಸುವಂತೆ ಕ್ರಮವಹಿಸುವುದು.
5. ಒಟ್ಟಾರೆಯಾಗಿ 2023–24 ನೇ ಶೈಕ್ಷಣಿಕ ಸಾಲಿನ ಆರಂಭದ ವೇಳೆಗೆ ಪ್ರತಿ ವಿದ್ಯಾರ್ಥಿಯು ತನ್ನ ತರಗತಿ ಮಟ್ಟದ ಕಲಿಕೆಯನ್ನು ಯಾವುದೇ ಅಡೆ ತಡೆ ಇಲ್ಲದೆ ಸಾಧಿಸಲು ಸಾಧ್ಯ ವಾಗುವಂತೆ ಸಜ್ಜುಗೊಳಿಸುವುದು.

### ಕಲಿಕಾ ಫಲಗಳ ಮರು ಹೊಂದಾಣಿಕೆ :

- ಎರಡು ವರ್ಷಗಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸಲು, ಪ್ರಸ್ತುತ ವರ್ಷಕ್ಕೆ ಕಲಿಕಾಫಲಗಳನ್ನು ಮರುಹೊಂದಾಣಿಕೆ ಮಾಡಲಾಗುವುದು
- ಪ್ರತಿ ತರಗತಿಗೆ ಹಿಂದಿನ ಎರಡು ವರ್ಷದ ಅತ್ಯಗತ್ಯ ಕಲಿಕಾಫಲಗಳು, ಪ್ರಸ್ತುತ ತರಗತಿಯ ಅಗತ್ಯ ಕಲಿಕಾಫಲಗಳು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಆಧರಿಸಿದ ಕಲಿಕಾ ಸಾಮಗ್ರಿಗಳನ್ನು ತಯಾರಿಸಿದೆ.
- ಕಲಿಕಾ ಫಲಗಳ ಮರು ಹೊಂದಾಣಿಕೆಯ ನಂತರ ತರಗತಿವಾರು ಹಾಗೂ ವಿಷಯವಾರು ಆಯ್ಕೆ ಮಾಡಿದ ಒಟ್ಟು ಕಲಿಕಾ ಫಲಗಳ ತರಗತಿ ಪ್ರಕ್ರಿಯೆಗಳನ್ನು ಅರ್ಥೈಸಲು ಶಿಕ್ಷಕರ (ಸುಗಮಕಾರರ) ಕೈಪಿಡಿಗಳನ್ನು ಸಿದ್ಧಪಡಿಸಿದೆ.

### ಸಂಪನ್ಮೂಲಗಳ ಪರಿಚಯ ಮತ್ತು ಬಳಕೆ :

#### 1. ಶಿಕ್ಷಕರ (ಸುಗಮಕಾರರ) ಕೈಪಿಡಿ :

- 1 ರಿಂದ 9ನೇ ತರಗತಿಯ ವಿಷಯವಾರು ಮರುಹೊಂದಾಣಿಕೆ ಮಾಡಿರುವ ನಿರ್ದಿಷ್ಟ ಕಲಿಕಾಫಲವಾರು ಚಟುವಟಿಕೆಗಳನ್ನು ತಮ್ಮ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಹೇಗೆ ಸಮ್ಮಿಳಿತಗೊಳಿಸಿಕೊಳ್ಳಬಹುದು ಎಂಬ ಬಗ್ಗೆ ವಿವರಣೆ ನೀಡಿದೆ.



- ಕಲಿಕಾ ಹಾಳೆಗಳನ್ನು ನಿರ್ವಹಿಸಲು ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ಹಾಗೂ ಮಾದರಿಗಾಗಿ ಕೆಲವು ಚಟುವಟಿಕೆಗಳನ್ನು ಒದಗಿಸಿದೆ.
- ಪಠ್ಯಪುಸ್ತಕಗಳಲ್ಲಿನ ಕಲಿಕಾಂಶಗಳಿಗೆ ಪೂರಕವಾದ ಬುನಾದಿ ಸಾಮರ್ಥ್ಯಗಳನ್ನು ಬೆಳೆಸಲು ಅಗತ್ಯವಿರುವ ಬೋಧನಾ ವಿಧಾನ ಮತ್ತು ಚಟುವಟಿಕೆಗಳ ಮಾದರಿ ನೀಡಿದೆ.
- ಈ ಚಟುವಟಿಕೆಗಳು ಶಿಕ್ಷಕರ ಕೈಪಿಡಿಯಲ್ಲಿ ನಿರ್ದೇಶಿಸಿರುವ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು, ವಿದ್ಯಾರ್ಥಿಗಳಿಗೆ ಸೃಜಿಸಿರುವ 'ಕಲಿಕಾ ಹಾಳೆ'ಯ ಚಟುವಟಿಕೆಗಳಿಗೆ ಅಗತ್ಯವಿರುವಲ್ಲಿ ಸಂಪರ್ಕ ಕಲ್ಪಿಸಲಾಗಿದೆ.

#### 2. ಕಲಿಕಾ ಹಾಳೆಗಳು :

- ಕಲಿಕಾ ಹಾಳೆಗಳು ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಚಟುವಟಿಕೆಗಳ ಗುಚ್ಛವನ್ನು ಒಳಗೊಂಡಿದೆ.
- ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಗಮನದಲ್ಲಿಟ್ಟುಕೊಂಡು ತರಗತಿವಾರು ಹಾಗೂ ವಿಷಯವಾರು ಆಯ್ಕೆ ಮಾಡಿದ ಕಲಿಕಾ ಫಲಗಳಿಗೆ ಹಲವಾರು ಚಟುವಟಿಕೆಗಳನ್ನು ನೀಡಿದೆ.
- ಈ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಸ್ವತಃ ಅಥವಾ ಶಿಕ್ಷಕರ ಸಹಾಯದಿಂದ ಕೈಗೊಳ್ಳಬೇಕೆಂಬ ಉದ್ದೇಶದಿಂದ ರಚಿಸಲಾಗಿದೆ.
- ಪ್ರತಿ ಕಲಿಕಾಫಲಕ್ಕಾಗಿ ರಚಿತವಾಗಿರುವ ಚಟುವಟಿಕೆಗಳ ಗುಚ್ಛವನ್ನು ವಿದ್ಯಾರ್ಥಿಗಳಿಗೆ ನೀಡಿ ಕಲಿಕಾ ಪ್ರಕ್ರಿಯೆಯನ್ನು ಕೈಗೊಳ್ಳಲು ಕಲಿಕಾ ಹಾಳೆಗಳನ್ನು ಬಳಸಿಕೊಳ್ಳಬೇಕು. ಪ್ರತಿ ಕಲಿಕಾ ಫಲದ ನಂತರ ಮೌಲ್ಯಮಾಪನ ಪ್ರಕ್ರಿಯೆಯನ್ನು ಪ್ರಸ್ತಾಪಿಸಲಾಗಿದ್ದು ನಮೂದಿಸಿರುವ ಸ್ತರಗಳನ್ನು ಬಳಸಿ ಕಲಿಕೆಯ ಮಟ್ಟವನ್ನು ದೃಢೀಕರಿಸಬೇಕು.

**ಬಳಸಬಹುದಾದ ಹೆಚ್ಚುವರಿ ಸಂಪನ್ಮೂಲಗಳು :** ಶಿಕ್ಷಕರು ಕಲಿಕಾ ಫಲ ಮತ್ತು ತರಗತಿ ಪ್ರಕ್ರಿಯೆಗಳ ಬಗ್ಗೆ ಡಿ.ಎಸ್.ಇ.ಆರ್.ಟಿ ಯಿಂದ ದೀಕ್ಷಾ ಪೋರ್ಟಲ್‌ನಲ್ಲಿ ಎನ್.ಇ.ಪಿ 2020 ಆಧಾರಿತ ಮಾಡ್ಯೂಲ್‌ಗಳಲ್ಲಿ ಹಂತವಾರು (ಬುನಾದಿ ಹಂತ, ಪೂರ್ವಸಿದ್ಧತಾ ಹಂತ, ಮಾಧ್ಯಮಿಕ ಹಂತ ಮತ್ತು ಪ್ರೌಢಹಂತ) ಕಲಿಕಾಫಲಗಳನ್ನು ಅನುಕೂಲಿಸುವ ಮತ್ತು ಮೌಲ್ಯಾಂಕನ ಮಾಡುವ ಬಗ್ಗೆ ವಿವರವಾದ ಕೋರ್ಸ್ ಲಭ್ಯವಿದೆ. ಇದರಲ್ಲಿರುವ ಕಪ್‌ಲೆಟ್‌ಗಳು ಮತ್ತು ವೀಡಿಯೋಗಳಿಂದ ಶಿಕ್ಷಕರು ಹೆಚ್ಚುವರಿ ಮಾಹಿತಿ ಮತ್ತು ಅನುಭವ ಪಡೆಯಬಹುದಾಗಿದೆ. ಹಾಗೆಯೇ 2021–22 ನೇ ಸಾಲಿಗೆ ಸಿದ್ದಪಡಿಸಿರುವ ಚಟುವಟಿಕೆ ಸಹಿತ ಪರ್ಯಾಯ ಶೈಕ್ಷಣಿಕ ಯೋಜನೆ, ಅಭ್ಯಾಸ ಪುಸ್ತಕಗಳು ಮತ್ತು ಇತರೆ ಶೈಕ್ಷಣಿಕ ಸಂಪನ್ಮೂಲಗಳು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಶಿಕ್ಷಕರು ಅವುಗಳನ್ನು ಬಳಸಬಹುದಾಗಿದೆ.

### ಕಲಿಕಾ ಚೇತರಿಕೆ – ಕಾರ್ಯಕ್ರಮದಲ್ಲಿ ಮೌಲ್ಯಮಾಪನದ ಸ್ವರೂಪ :

ಪ್ರಸಕ್ತ ಸಾಲಿನ 1 ರಿಂದ 9 ನೇ ತರಗತಿಗಳಿಗೆ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಶಾಲಾಧಾರಿತ ಮೌಲ್ಯಮಾಪನ (ಸಿ.ಸಿ.ಇ) ವನ್ನು ಈ ಹಿಂದಿನಂತೆಯೇ ಮುಂದುವರೆಸಿದೆ. ಆದರೆ ಈ ಮೌಲ್ಯಮಾಪನವು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಮರುಹೊಂದಿಸಿಕೊಂಡ ಕಲಿಕಾ ಫಲಗಳನ್ನು ಆಧರಿಸಿದ ಕಲಿಕಾ ಹಾಳೆಗಳು ಮತ್ತು ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಆಧರಿಸಿದೆ. ಮೌಲ್ಯಮಾಪನ ಸಂಬಂಧ ವಿವರವಾದ ಮಾರ್ಗಸೂಚಿಯನ್ನು ಪ್ರತ್ಯೇಕವಾಗಿ ನೀಡಲಾಗುವುದು.

### 10 ನೇ ತರಗತಿಗೆ ಮೌಲ್ಯಮಾಪನ :

10ನೇ ತರಗತಿಗೆ 2021–2022 ನೇ ಸಾಲಿನಂತೆ ಸೇತುಬಂಧ ಕಾರ್ಯಕ್ರಮವನ್ನು 2022–2023 ನೇ ಸಾಲಿನಂತೆ ಮುಂದುವರಿಸಲಾಗುವುದು. ರೂಪಣಾತ್ಮಕ ಮೌಲ್ಯ ಮಾಪನ ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳನ್ನು ಹಿಂದಿನಂತೆಯೇ ನಡೆಸಿ, ವಿದ್ಯಾರ್ಥಿಗಳನ್ನು ವಾರ್ಷಿಕ ಪರೀಕ್ಷೆಗಳಿಗೆ ಸಿದ್ಧಗೊಳಿಸುವುದು.

### ಕಾರ್ಯಕ್ರಮ ಅನುಷ್ಠಾನದ ರೂಪುರೇಷೆ :

ಇದು ರಾಜ್ಯ ಮಟ್ಟದ ಕಾರ್ಯಕ್ರಮವಾಗಿದ್ದು, ಶೈಕ್ಷಣಿಕ ವರ್ಷದ ಚಟುವಟಿಕೆಗಳನ್ನು ಮರುಹೊಂದಾಣಿಕೆ ಮಾಡಿಕೊಂಡಿರುವುದರಿಂದ ಅನುಷ್ಠಾನ ಹಾಗೂ ಅನುಪಾಲನೆಗಾಗಿ ಎಲ್ಲಾ ಹಂತದ ಭಾಗೀದಾರರು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಬೇಕಿದೆ.



### ಜಿಲ್ಲಾ ಹಂತದ ಜವಾಬ್ದಾರಿಗಳು :

#### ಉಪನಿರ್ದೇಶಕರು (ಅಭಿವೃದ್ಧಿ) ರವರ ಜವಾಬ್ದಾರಿಗಳು:

- ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಅನುಷ್ಠಾನ ಹಾಗೂ ಅನುಪಾಲನೆ ಮಾಡಲು ಡಯಟ್ ಹಂತದಲ್ಲಿರುವ ಒಬ್ಬ ಹಿರಿಯ ಉಪನ್ಯಾಸಕರನ್ನು ಕಲಿಕಾ ಚೇತರಿಕೆ ಕಾರ್ಯಕ್ರಮಕ್ಕೆ ನೋಡಲ್ ಅಧಿಕಾರಿಯಾಗಿ ನೇಮಿಸುವುದು.
- ಸಂಪನ್ಮೂಲ ಸಾಹಿತ್ಯದ ಬಳಕೆ ಹಾಗೂ ಕಾರ್ಯಕ್ರಮದ ಅನುಷ್ಠಾನ ಮಾಡಲು ವಿಷಯವಾರು ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ರಾಜ್ಯ ಹಂತಕ್ಕೆ ತರಬೇತಿಗಾಗಿ ನಿಯೋಜಿಸುವುದು.
- ರಾಜ್ಯ ಹಂತದಲ್ಲಿ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳ ಸಹಾಯದೊಂದಿಗೆ ಜಿಲ್ಲಾ ಹಂತದಲ್ಲಿ ಕಲಿಕಾ ಚೇತರಿಕೆ – ಕಾರ್ಯಕ್ರಮದ ತರಬೇತಿಯನ್ನು ತಾಲ್ಲೂಕು ಸಂಪನ್ಮೂಲ ವ್ಯಕ್ತಿಗಳಿಗೆ ನೀಡುವುದು.
- ಕಲಿಕಾ ಚೇತರಿಕೆ ಕಾರ್ಯಕ್ರಮದ ಮಾಹೆವಾರು ಪ್ರಗತಿ ಪರಿಶೀಲನೆ ಸಭೆಯನ್ನು ಉಪನಿರ್ದೇಶಕರು ( ಆಡಳಿತ ) ಇವರ ಸಮನ್ವಯದೊಂದಿಗೆ ನಡೆಸಿ ಕಾರ್ಯಕ್ರಮದ ಮೇಲ್ವಿಚಾರಣೆ ಮಾಡುವುದು.
- ಕಲಿಕೆಯನ್ನು ದೃಢೀಕರಿಸಲು ಕಾರ್ಯಕ್ರಮದ ಆರಂಭ, ಮಧ್ಯಂತರ, ಅಂತ್ಯದ ವೇಳೆಯಲ್ಲಿ ಆಳಶೋಧನಾ ಅಧ್ಯಯನ ನಡೆಸುವುದು.
- ಜಿಲ್ಲಾ ಹಂತದಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮದ ಉತ್ತಮ ಅಭ್ಯಾಸಗಳ ಹಂಚಿಕೆಗೆ ವೇದಿಕೆಯನ್ನು ಕಲ್ಪಿಸುವುದು. (ವರ್ಷಕ್ಕೆ ಕನಿಷ್ಠ ಎರಡು ಬಾರಿ)
- ಕಾಲ ಕಾಲಕ್ಕೆ ಕಾರ್ಯಕ್ರಮದ ಉತ್ತಮ ಅನುಷ್ಠಾನಕ್ಕೆ ಅಗತ್ಯ ಸಹಾಯ ಮತ್ತು ಬೆಂಬಲವನ್ನು ಒದಗಿಸುವುದು.





#### ಉಪನಿರ್ದೇಶಕರು (ಆಡಳಿತ) ರವರ ಜವಾಬ್ದಾರಿಗಳು :

- ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಅನುಷ್ಠಾನ ಹಾಗೂ ಅನುಪಾಲನೆ ಮಾಡಲು ವಿಷಯ ಪರಿವೀಕ್ಷಕರನ್ನು ವಿಷಯವಾರು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವುದು.
- ಶಿಕ್ಷಣಾಧಿಕಾರಿಗಳು ಹಾಗೂ ಡಿ.ವೈ.ಪಿ.ಸಿ–1 ಮತ್ತು 2 ಹಾಗೂ ಎ.ಪಿ.ಸಿ.ಓ–1 ಮತ್ತು 2 ಇವರನ್ನು ಕಾರ್ಯಕ್ರಮದ ಅನುಷ್ಠಾನ ಹಾಗೂ ಅನುಪಾಲನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು.
- ಡಯಟ್ ಹಂತದಲ್ಲಿ ನಡೆಯುವ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪಾಲ್ಗೊಂಡು ಶಾಲಾ ಹಂತದಲ್ಲಿ ತಾವು ಕಂಡ ಅನುಭವಗಳನ್ನು ಹಂಚಿಕೊಳ್ಳುವುದು.
- ತರಬೇತಿಗೆ ಶಿಕ್ಷಕರನ್ನು ನಿಯೋಜಿಸಲು ಸಕಾಲದಲ್ಲಿ ಅಗತ್ಯ ಕ್ರಮವಹಿಸುವುದು.
- ತರಬೇತಿಯ ಪ್ರಗತಿಯನ್ನು ಕಾಲಕಾಲಕ್ಕೆ ಅನುಪಾಲನೆ ಮಾಡಿ ನಿಯೋಜಿತ ಶಿಕ್ಷಕರು ತರಬೇತಿಯಲ್ಲಿ ಭಾಗವಹಿಸುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಕಾಲ ಕಾಲಕ್ಕೆ ಕಾರ್ಯಕ್ರಮದ ಉತ್ತಮ ಅನುಷ್ಠಾನಕ್ಕೆ ಅಗತ್ಯ ಸಹಾಯ ಮತ್ತು ಬೆಂಬಲವನ್ನು ಒದಗಿಸುವುದು.

### ತಾಲ್ಲೂಕು ಹಂತದ ಜವಾಬ್ದಾರಿಗಳು :

- ಕಲಿಕಾ ಚೇತರಿಕೆ ಕಾರ್ಯಕ್ರಮದ ಹಿನ್ನೆಲೆ, ಸಂಪನ್ಮೂಲಗಳ ಪರಿಚಯ ಮತ್ತು ಅನುಷ್ಠಾನದ ಕುರಿತು ಅನುಷ್ಠಾನ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವುದು. ( ಬಿ.ಆರ್.ಪಿ, ಇ.ಸಿ.ಓ, ಸಿ.ಆರ್.ಪಿ, ಬಿ.ಐ.ಇ.ಆರ್.ಟಿ)
- ಜಿಲ್ಲಾ ಹಂತದಲ್ಲಿ ನಡೆಯುವ ಸಂಪನ್ಮೂಲ ವ್ಯಕ್ತಿಗಳ ತರಬೇತಿಗೆ ಸೂಕ್ತ ವ್ಯಕ್ತಿಗಳನ್ನು ( ಶಿಕ್ಷಕರು ಅಥವಾ ಅನುಷ್ಠಾನಾಧಿಕಾರಿಗಳು) ಗುರುತಿಸಿ ನಿಯೋಜಿಸುವುದು.
- ಜಿಲ್ಲಾ ಹಂತದಲ್ಲಿ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ತಮ್ಮ ವ್ಯಾಪ್ತಿ ಶಿಕ್ಷಕರಿಗೆ ತರಬೇತಿಯನ್ನು ಆಯೋಜಿಸುವುದು.
- ಪ್ರತಿತಿಂಗಳು ಸಮೂಹ ಸಂಪನ್ಮೂಲ ಸಭೆಗಳನ್ನು ( ಕ್ಲಸ್ಟರ್ ಸಮಾಲೋಚನಾ ಸಭೆ ) ಆಯೋಜಿಸಿ ಕಲಿಕಾ ಚೇತರಿಕೆ ಕಾರ್ಯಕ್ರಮದ ಪ್ರಗತಿ ಮತ್ತು ಅನುಭವ ಹಂಚಿಕೆಗೆ ಅವಕಾಶ ನೀಡುವುದು ಹಾಗೂ ಉತ್ತಮ ಅಭ್ಯಾಸಗಳ ಬಗ್ಗೆ ವಿವರವಾದ ವರದಿಯನ್ನು ಸಂಬಂಧಿಸಿದ ಡಯಟ್‌ಗೆ ಸಲ್ಲಿಸುವುದು.
- ಪ್ರಸ್ತುತ ಸ್ಥಿತಿಗತಿಗಳನ್ನು ಅವಲೋಕಿಸಿ ಸೂಕ್ತ ಹಿಮ್ಮಾಹಿತಿಯನ್ನು ಶಾಲಾ ಹಂತಕ್ಕೆ ಒದಗಿಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ನೇತೃತ್ವದಲ್ಲಿ ಕಾಲಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಕಾರ್ಯಕ್ರಮದ ಅನುಪಾಲನೆ ಮಾಡುವುದು.
- ರಾಜ್ಯ ಹಂತದಿಂದ ವಿತರಣೆಯಾಗುವ ಸಂಪನ್ಮೂಲ ಸಾಹಿತ್ಯಗಳು ಪ್ರತಿ ಶಾಲೆಗೆ ತಲುಪಿರುವ ಬಗ್ಗೆ ದೃಢೀಕರಣ ಮಾಡಿಕೊಳ್ಳುವುದು ಹಾಗೂ ಅವುಗಳ ಬಳಕೆಯ ಬಗ್ಗೆ ಅನುಪಾಲನೆ ಮಾಡುವುದು.

### ಶಾಲಾ ಹಂತದ ಜವಾಬ್ದಾರಿಗಳು :

- ಶಾಲೆಯ ಎಲ್ಲಾ ಭಾಗೀದಾರರಿಗೆ ಕಲಿಕಾ ಚೇತರಿಕೆ ಕಾರ್ಯಕ್ರಮದ ಮಹತ್ತ್ವದ ಕುರಿತು ಅರಿವು ಮೂಡಿಸುವುದು. ( ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಸ್ಥಳೀಯ ಜನ ಪ್ರತಿನಿಧಿಗಳು)
- ಕಾರ್ಯಕ್ರಮ ಹಾಗೂ ಸಂಪನ್ಮೂಲಗಳ ಪರಿಚಯಕ್ಕಾಗಿ ಆಯೋಜಿಸಿದ ತರಬೇತಿಯಲ್ಲಿ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಭಾಗವಹಿಸುವುದು.
- ಕಲಿಕಾ ಚೇತರಿಕೆಗಾಗಿ ನೀಡಿದ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿ ವಿದ್ಯಾರ್ಥಿಗಳ ಕಲಿಕೆಯನ್ನು ದೃಢೀಕರಿಸುವುದು ಹಾಗೂ ಪ್ರತಿವಾರ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಭೆಯನ್ನು ಶಾಲಾ ಮಟ್ಟದಲ್ಲಿ ಹಮ್ಮಿಕೊಳ್ಳುವುದು.
- ನೀಡಲಾದ ಸಂಪನ್ಮೂಲಗಳ ಹೊರತಾಗಿ ಕಲಿಕಾ ಚೇತರಿಕೆಗೆ ಅಗತ್ಯವಿರುವ ಇತರೆ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವುದು.

ಮೇಲಿನ ಎಲ್ಲಾ ಅಂಶಗಳನ್ನು ಮನನ ಮಾಡಿಕೊಂಡು ಎಲ್ಲಾ ಹಂತದ ಅಧಿಕಾರಿಗಳು, ಅನುಷ್ಠಾನಾಧಿಕಾರಿಗಳು ಹಾಗೂ ಶಿಕ್ಷಕರು ಕಾರ್ಯಕ್ರಮದ ಆಶಯವನ್ನು ಈಡೇರಿಸುವುದು.



ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
ಇವರ ಸಹಯೋಗದಲ್ಲಿ

# ಕಲಿಕಾ ಚೇತರಿಕೆ

## ರಾಜ್ಯ ಮಟ್ಟದ ಕಾರ್ಯಾಗಾರ




ದಿನಾಂಕ : 18– 03–2022 ಸಮಯ : ಬೆಳಗ್ಗೆ – 9–00 ರಿಂದ ಸಂಜೆ 04–30

ಸ್ಥಳ : ಆರ್. ವಿ. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಜಯನಗರ, ಬೆಂಗಳೂರು – 11

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ನಂ. 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3 ನೇ ಹಂತ, ಬೆಂಗಳೂರು – 560 085